ಗೆಲುವನ್ನೇ ನಿರೀಕ್ಷಿಸುತ್ತಿದ್ದ ಬಾನು, ಈ ಅನಿರೀಕ್ಷಿತ ಮುಕ್ತಾಯದಿಂದ ಆಘಾತಗೊಂಡಳು. ಅವಳ ಕಣ್ಣಲ್ಲಿ ಕಾಯುತ್ತಿದ್ದ 'ಹನಿ ಒಡೆಯಲಿಕ್ಕೆ ಬಂದಂತಹ ಮೋಡ'ಗಳು ಒಡೆದು ಧಾರಾಕಾರ ಮಳೆ ಸುರಿಯಲಾರಂಭಿಸಿತು. ಮನೆ ಸ್ವಂತದ್ದಿರಲಿ ಬಾಡಿಗೆಯದಿರಲಿ, ಅದರೊಟ್ಟಿಗೆ ಭಾವನಾತ್ಮಕ ಸಂಬಂಧ ಬೆಳೆಸಿಕೊಳ್ಳುವಲ್ಲಿ ಗಂಡಸರಿಗಿಂತ ಮಹಿಳೆಯರು ಹೆಚ್ಚು ಸೂಕ್ಷ್ಮರೆಂದು ಕಾಣುತ್ತದೆ. ಅವರನ್ನು ನೋಯಿಸಲು ಹರಿತವಾದ ಚಾಕುವಿನ ಅಗತ್ಯವಿಲ್ಲ. 'ಮನೆಬಿಟ್ಟು ಹೋಗು' ಎಂದರೆ ಸಾಕು. ಈ ಮಾತನ್ನು ಆವೇಶದ ಗಳಿಗೆಯಲ್ಲಾದರೂ ಮಡದಿಯ ಮುಂದೆ ನುಡಿಯದ ಪತಿಪುರುಷರು ಇರುವರೇ ಈ ನಾಡಿನಲ್ಲಿ? ಮಾಲೀಕನಾಡಿದ ಮಾತಲ್ಲಡಗಿದ್ದ ಯಾವ ಅಭದ್ರ ಅರ್ಥಗಳು ಅವಳ ಸುಪ್ತವೇದನೆಯನ್ನು ಇರಿದು ಎಬ್ಬಿಸಿದವೊ ಯಾರುಬಲ್ಲರು? 'ಅರೆ, ಮನೆಯ ಓನರ್ ಅವನು. ಅವನಿಗೆ ಹಾಗೆ ಹೇಳಲು ಎಲ್ಲ ಹಕ್ಕಿದೆ. ನಾವೆಷ್ಟಿದ್ದರೂ ಬಾಡಿಗೆದಾರರು. ಒಂದಲ್ಲಾ ಒಂದು ದಿನ...' ಸಮಜಾಯಿಶಿ ನೀಡಿದೆ.

ಆಕೆಯ ದುಗುಡ ನಿಲುಗಡೆಯಾಗಲಿಲ್ಲ. ಸತಿಹೃದಯ ಭೇದಕವೂ ಯಃಕಶ್ಚಿತ್ತೂ ಆದ ಮಾಲೀಕನ ಒಂದು ಹೇಳಿಕೆ, ಜೀವನದಲ್ಲಿ ಕ್ರಾಂತಿಕಾರಕ ಪಲ್ಲಟಕ್ಕೆ ಮುನ್ನುಡಿ ಬರೆದೀತೆಂದು ನಾನು ಎಣಿಸಿರಲಿಲ್ಲ. ಆ ರಾತ್ರಿ ಅಶೋಕವನದ ಸೀತೆಯಂತೆ ರಾತ್ರಿಯೆಲ್ಲ ನಿದ್ದೆಮಾಡದೆ ಬಾನು ಮುದುಡಿ ಕುಳಿತಳು. ಗೊರಕೆ ಹೊಡೆಯುತ್ತ ಬಿದ್ದಿದ್ದ ನನ್ನನ್ನು ಕಲ್ಲುನೀರು ಕರಗುವ ಹೊತ್ತಲ್ಲಿ ಎಬ್ಬಿಸಿ, ತಿಳಿಗೊಳಕ್ಕೆ ಕಲ್ಲೆಸೆದಂತೆ, 'ನಾವೇಕೆ ನಮ್ಮ ಮನೆ ಕಟ್ಟಬಾರದು?' ಎಂಬ ಪ್ರಶ್ನೆ ಮುಂದಿಟ್ಟಳು. ಅಪ್ಪನಿಗೂ ಅಮ್ಮ ಹೀಗೆ ಎಬ್ಬಿಸಿ ಇಂಥದೇ ಕರ್ಣಕಠೋರ ಪ್ರಶ್ನೆ ಕೇಳಿರಬೇಕು. ನನಗೆ ಬಿಸಿಲಸೀಮೆಯಲ್ಲಿ ಕಾಯಂ ನೆಲೆಸುವ ಇರಾದೆಯೇ ಇರಲಿಲ್ಲ. ನಿವೃತ್ತಿ ಬಳಿಕ ಗಂಟುಮೂಟೆ ಕಟ್ಟಿಕೊಂಡು ಊರತ್ತ ಹೋಗಬೇಕೆಂದೂ ಅಲ್ಲಿತನಕ ಬಾಡಿಗೆ ಮನೆಗಳಲ್ಲಿ ಕಾಲಯಾಪನೆ ಮಾಡಬೇಕೆಂದೂ ಲೆಕ್ಕಚಾರ ಹಾಕಿದ್ದೆ. ಇವಳ ಪ್ರಶ್ನೆ ಎದೆಗೆ ಬಾಣದಂತೆ ತಾಗಲು ನಿದ್ದೆ ಹಾರಿಹೋಯಿತು. 'ಸರಿ, ವಿಚಾರ ಮಾಡೋಣ. ಈಗ ಮಲಗು' ಎಂದು ಬೀಸುದೊಣ್ಣೆ ತಪ್ಪಿಸಿಕೊಂಡೆ. ಆದರೆ ಬೆಳಕು ಹರಿದೊಡನೆ ಚಹಾಪಾನದೊಂದಿಗೇ ಮನೆಕಟ್ಟುವ ಸಂಗೀತ ಆರಂಭವಾಯಿತು. ಥರ್ಟಿಫಾರ್ಟಿಯಲ್ಲಿ ಕಟ್ಟಿದ ಮನೆಗಳು ಕಂಡಾಗಲೆಲ್ಲ, 'ನಮಗೆ ಇಷ್ಟಾದರೆ ಸಾಕಲ್ಲವಾ?' ಎಂದು ಎದೆತಂತಿ ಮೀಟಲಾರಂಭಿಸಿದಳು. 'ಲಗ್ನವಾದ ಬಳಿಕ ನಾನು ನನಗಾಗಿ ಅಂತ ಏನು ಕೇಳಿಲ್ಲ. ಇದೊಂದಕ್ಕೆ ಇಲ್ಲ ಅನ್ನಬಾರದು' ಎಂದು ಪಲ್ಲವಿಸತೊಡಗಿದಳು. ಇಲ್ಲವೆನ್ನಲಾಗದೆ ಅವಘಡವನ್ನು ಸಾಧ್ಯವಾದಷ್ಟು ದಿನ ಮುಂದೂಡಿದೆ. ಆದರೆ ಸಂಗದೋಷದಿಂದ ನನಗೂ ಸ್ವಂತ ಮನೆಯ ಕನಸು ಬೀಳತೊಡಗಿತು. ಕಾಸಿನಕಸುವು ಇಲ್ಲದ್ದರಿಂದಲೊ ಮನೆಯನೆಂದೂ ಕಟ್ಟದಿರು ಎಂಬ ಹುಸಿ ಆದರ್ಶದಿಂದಲೊ ದಮನಿಸಿಟ್ಟಿದ್ದೆನೆಂದು ಕಾಣುತ್ತದೆ, ಈಗ ಎಚ್ಚೆತ್ತು ನನ್ನನ್ನು ಸಂಪೂರ್ಣ ಆವರಿಸಿಕೊಂಡಿತು. ಒಂದು ದಿನ ಶುಭಗಳಿಗೆಯಲ್ಲಿ ಇಬ್ಬರೂ ಕೂತು ಚರ್ಚಿಸಿ 'ಮನೆಯಿಂದ ಮನೆಗೆ ಅಲೆದಾಟ ಮಾಡಿದ್ದು ಸಾಕು. ಅಂಬಲಿ ಕುಡಿದರೂ ಪರವಾಗಿಲ್ಲ. ಮನೆ ಖಾಲಿಮಾಡಿ ಎಂದು ಯಾರೂ ಹೇಳದ ಗೂಡೊಂದನ್ನು ಕಟ್ಟಿಕೊಳ್ಳಲೇಬೇಕು. ಅದಕ್ಕೆ ಅಭಿಮಾನಸೂಚಕ ಹೆಸರನ್ನೇ ಇಡಬೇಕು. ಅದು ಎಲ್ಲರದಂತಿರಬಾರದು. ಸರಳವಾಗಿರಬೇಕು. ವಿಶಾಲವಾಗಿರಬೇಕು. ದೊಡ್ಡ ಹಿತ್ತಲಿರಬೇಕು. ಸುತ್ತ ಗಿಡಮರ ನೆಡಬೇಕು' ಎಂದು ಏಕಪಕ್ಷೀಯ ಠರಾವು ಪಾಸುಮಾಡಿದೆವು.

ದುಸ್ಸಾಹಸಕ್ಕೆ ಇಳಿವ ಮೊದಲು ವಿಶಿಷ್ಟವಾಗಿ ಕಟ್ಟಿರುವ ಕೆಲವಾದರೂ ಮನೆಗಳನ್ನು ಪರಿಶೀಲಿಸಬೇಕು, ಕಟ್ಟಿದವರ ಅನುಭವ ಕೇಳಬೇಕು ಅನಿಸಿತು. ನಮ್ಮ ಅಭಿರುಚಿಗೆ